ಸಾಕ್ಷಿಯನ್ನು ದಿನಾಂಕ 05-12-2019 ರಂದು ಪುನಹ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲು ಃ ಶ್ರೀ ಕೆಬಿವಿ ವಕೀಲರಿಂದಃ**

ದಾವಾ ಆಸ್ತಿಯು ನನ್ನ ತಂದೆ ನನಗೆ ಉಳಿದ ವಾದಿಗಳಿಗೆ ಮತ್ತು ಪ್ರತಿವಾದಿಗಳಿಗೆ ಡಿಕ್ರಿ ಮೂಲಕ ಬಂದ ಆಸ್ತಿ ಎಂದರೆ ಸರಿ. ವಾದಿಗಳು ಮತ್ತು ಪ್ರತಿವಾದಿಗಳಲ್ಲ ಎಲ್ಲದೇ ಹೊನ್ನಪ್ಪ ರೈ ಎಂಬವರು ನಮ್ಮ ತಂದೆಗೆ ಗೊತ್ತಿರುತ್ತದೆ. ಈ ರೀತಿ ಜೊತೆಯಾಗಿ ಬಂದ ದಾವಾ ಆಸ್ತಿಯಲ್ಲಿ ಸದ್ರಿ ಹೊನ್ನಪ್ಪ ರೈ ರವರಿಗೆ ಯಾವುದೇ ಭಾಗ ನೀಡಿರುವುದಿಲ್ಲ, ಸದ್ರಿ ಹೊನ್ನಪ್ಪ ರೈ ರವರಿಗೆ ದಾವಾ ಆಸ್ತಿಯಲ್ಲಿ 5ಃ1 ನೇ ಅಂಶದ ಹಕ್ಕು ಇರುತ್ತದೆ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದ್ರಿ ದಾಖಲು ನಾವು ತಹಶೀಲ್ದಾರ್ ಸುಳ್ಯ ರವರಿಗೆ ದಾವಾ ಆಸ್ತಿಯ ಸಲುವಾಗಿ ನೀಡಿದ ಅರ್ಜಿ, ಸಂತತಿ ನಕ್ಷೆ, ಹಾಗೂ ಸದ್ರಿ ಅರ್ಜಿಯ ಮೇಲೆ ಆದ ಆದೇಶ ಹೇಳಿಕೆ ಎಂದರೆ ಸರಿ. ಸದ್ರಿ ಮುಟೇಷನ್ ದಾಖಲೆಗಳನ್ನು ಸಾಕ್ಷಿಗೆ ಸದ್ರಿ ದಾಖಲೆಗಳನ್ನು ಒಟ್ಟಾಗಿ ತೋರಿಸಲಾಗಿ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನಾನು ತಹಶೀಲ್ದಾರರ ಮುಂದೆ ನಿಡಿ-1 ರಲ್ಲಿ ಹೇಳಿರುವುದು ಸರಿಯಾಗಿರುತ್ತದೆ. ಕಲ್ಲಮಡ್ಕ ಗ್ರಾಮ ಸರ್ವೆ27ಃ1ಎ1ಎ3 3ನೇ ವಾದಿಗೆ ಮಂಜೂರುಯಾಗಿರುತ್ತದೆ. ಸದ್ರಿ ಮಂಜೂರಾತಿಯನುನ್ನ ನನ್ನ ಅಣ್ಣ ಹೊನ್ನಪ್ಪ ರೈ ಮಂಜೂರಾತಿಯ ವಿರುದ್ಧ ಅರ್ಜಿ ಸಲ್ಲಿಸಿದು ಆ ಮಂಜೂರು ಈಗ ರದ್ದು ಆಗಿರುತ್ತದೆ. ಸದ್ರಿ ಆಸ್ತಿಯುಕುಟುಂಬದ ಆಸ್ತಿಯು ಕುಮ್ಕಿ ಜಮೀನು ಎಂಬುದಾಗಿ ಅಪೀಲು ಮಾಡಿರುವುದು ಸರಿ. ಸದ್ರಿ ದರ್ಖಾಸು ರದ್ದು ಆದ ನಂತರ 3ನೇ ವಾದಿಯವರು ಅಪೀಲು ಮಾಡಿರುವುದಿಲ್ಲ, ಅದೇ ಕುಮ್ಕಿ ಜಾಗದಲ್ಲಿ ನಮ್ಮ ತಂದೆಗೆ ಸೇರಿದ ಮನೆ ಇದೆ. ಅದು ನಮ್ಮ ಕುಟುಂಬದ ಮನೆಯಾಗಿರುತ್ತದೆ. ಸದ್ರಿ ಕುಟುಂಬದ ಮನೆಯನ್ನು ಕುಟುಂಬದ ಮನೆಯ ಅಡಿ ಸ್ಥಳವನ್ನು ಕುಟುಂಬದ ಯಜಮಾನಿಕೆ ಅಡಿಯಲ್ಲಿ ಅರ್ಜಿ ಸಲ್ಲಿಸಿರುತ್ತೆನೆ ಎಂದರೆ ಸರಿ. ಯಜಮಾನಿ ನೆಲೆಯಲ್ಲಿ ನನಗೆ ಮಂಜೂರಾದ ಕಾರಣ ವಾದಿ ಮತ್ತು ಪ್ರತಿವಾದಿಗಳಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ, ಮೊದಲಿಗೆ ಸದ್ರಿ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಇತ್ತು, ಆ ಮನೆ ಇರುವ ಜಾಗವು ದಾವಾ ಆಸ್ತಿಯು ಬಗ್ಗೆ ನನ್ನ ತಂದೆ ಅವರ 5ಃ1 ನೇ ಭಾಗವನ್ನು ನನಗೆ ವೀಲು ಮುಖಾಂತರ ನೀಡಿರುತ್ತಾರೆ. ಉಳಿದ 4 ಹಿಸ್ಸೆದಾರರು ಎಂದರೆ ನಾನು ಹಾಗೂ 2 ಮತ್ತು 3 ವಾದಿಗಳು, ಪ್ರತಿವಾದಿ ಹಾಗೂ ಹೊನ್ನಪ್ಪ ರೈಯಾಗಿರುತ್ತಾರೆ. ವಾದ ಪತ್ರಕ್ಕೆ ನಾನೇ ಅನುಭವ ನೀಡಿರುತ್ತೇನೆ. ನನ್ನ ಪ್ರಕಾರ ದಾವೆಯಲ್ಲಿ 5ಃ1ನೇ ಅಂಶವನ್ನು ಕೇಳಿರುತ್ತೇನೆ. 2 ರಿಂದ 4 ರವರಿಗೆ ಒಂದು ಅಂಶ, ಪ್ರತಿವಾದಿಗೆ ಒಂದು ಅಂಶ, ಹೊನ್ನಪ್ಪ ರೈ ರವರಿಗೆ ಒಂದು ಅಂಶ ಇರುತ್ತದೆ. ದಾವಾಯಲ್ಲಿ ಹೇಳಿರುವ ವೀಲು ಇತ್ತೀಚೆಗೆ ನಾನು ನಮ್ಮ ವಕೀಲರರಿಗೆ ನೀಡಿರುತ್ತೇನೆ. ಮೀಲು ಪ್ರಕಾರ ನನಗೆ ಆಸ್ತಿ ಬರಬೇಕೆಂದು ನಾನು ಕೇಳಿರುವುದಿಲ್ಲ, ನನಗೆ ದಾವಾ ಆಸ್ತಿಯಲ್ಲಿ 5ಃ1 ನೇ ಅಂಶ ಮಾತ್ರ ಇರುತ್ತದೆ ನಾನು ಕೇಳಿರುವ ಹಾಗೇ 3ಃ1 ನೇ ಅಂಶ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಹೊನ್ನಪ್ಪ ರೈ ರವರಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ಕುಟುಂಬದ ಎಲ್ಲಾ ದಾವಾಸ್ತಿಗಳನ್ನು ಸೇರಿಸಿರುವುದಿಲ್ಲ ಎಂದರೆ ಸರಿ ಹಾಗೂ ಹೊನ್ನಪ್ಪ ರೈ ರವರು ಸಹಾ ಅಗತ್ಯ ಪಕ್ಷಗಾರರು ಆಗಿದ್ದರು ಸಹಾ ಉದ್ದೇಶ ಪೂರ್ವಕವಾಗಿ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾನು ಒಂದು ಸುಳ್ಳು ದಾವೆಯನ್ನುಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಿಂದ ಪ್ರತಿವಾದಿಗೆ ನಷ್ಟವಾಗಿರುತ್ತದೆ ಅದನ್ನು ನಾನೇ ಬರಿಸಲು ಬಾಧ್ಯಳು ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

ತೆ.ನ್ಯಾ.ಸಾ.ಹೇ. ನನ್ನ ಉ. ಬೆ. ಮಾಡಲಾಯಿತು

ಓ.ಹೇ.ಕೇ.ಸ.ಇದೆ ಎಂದು ಒಪ್ಪಿರುತ್ತಾರೆ

ಸಿವಿಲ್ ನ್ಯಾಯಾಧೀಶರು, ಸುಳ್ಯ.